ಬೋಳಿಸಿಕೊಂಡ್ರ ಕುತ್ತಿಗಿನ ಕೊಯ್ತಿನಿ ನೋಡು...' ಅಂತ ಕತ್ತಿ, ಡಾಲು, ತ್ರಿಶೂಲ ಹಿಡಕೊಂಡು ಕುಣಕಂತ ಬಂದಂಗ ಆಗತೈತಿ. ಮನ್ಯಾಗ ಹೆಣ್ಮಕ್ಕಳಿಗೆ ಒಳ್ಳೇದು, ಕೆಟ್ಟದು ಮರ್ಯಾದಿ ಮಾಡಿಕೊಳ್ಳದಂಗ ನಿಮ್ಮಪ್ಪ ಮಾಡಿಟ್ಟಾನ... ಹಂಗ ಬಯಲಿಗೆ ಹೊಗಿ ಮಾಡಿಕೊಳ್ಳಬೇಕಂದ್ರ ಆ ಕಳ್‌ದ್ಯಾವ ತನ್ ಹಳೇಜಾಗಂತ ಅಲ್ಲೇ ಗೂಟ ಬಡಕಂದು ಕೂತಿರತಾನ, ಅಪ್ಪಿತಪ್ಪಿ ಕಳ್‌ದ್ಯಾವ ಇಲ್ಲದ್ದು ನೋಡಿ ಅಲ್ಲಿಗೆ ಹೋದ್ರ ಅದೇ ಜಾಗದಾಗ ಊರು ಹೆಣ್ಮಕ್ಕು ಒಬ್ರುಮ್ಯಾಲ ಒಬ್ರು ಅದೇ ಹಸಿಬಿಸಿ, ಒಣ ಸಂಡಾಸಿನಮ್ಯಾಲ ಕುಂತಿರತಾರ.. ಛಲೋರು ಆ ಹೊಲ್ಸುಜಾಗ ನೋಡಿದ್ರ ನಿಂತಲ್ಲೇ ಕುತಿಗಿ ಕೊಯ್ಕಂದು ಸಾಯ್ತಾರ. ನಾವಾ ಬಂಡ್ರಾಗಿವಿ... ಹಿಂಗಿದ್ದ ಜಾಗದಾಗ ಈ ಕೂದ್ಲನ್ನ ಅಲ್ಲಲ್ಲಿ ತಟು ಜಾಗದಾಗ ಕ್ಲೀನ್ ಮಾಡಿಕೊಳ್ಳಬೇಕು... ಅಲ್ಲಿ ಸಂಡಾಸು ಕುಂತ್ರ ಸಾಕಂತ ಭಯದಾಗ ಕುಂತು ಪುಣ್ಯಕ್ಕ ಇಷ್ಟಾದ್ರು ಜಾಗೈತಂತ ಆ ಜಾಲ್ಯಾ ಜಾಗಕ್ಕ ಕೈಮುಗುದು ಬರ್‍ತಿನಿ... ಈ ಚಂದಪೂರಿಗೆ, ನಿಮ್ಮಪ್ಪಗ, ಆ ಕಳ್‌ದ್ಯಾವಗ ಹೆಣ್ಮಕ್ಕು ಸೂಕ್ಷ್ಮವಿಚಾರ ಏನಂಥ ಗೊತ್ತಾಗಲ್ಲ... ಒಟ್ಟ ನಿಮಪ್ಪ ನಮ್ಮನ್ನ ಏನ್‌ಮಾಡಾಕ ಬಿಡಲ್ಲ... ಯಾಕಡೆ ತಿರುಗಿದ್ರ ತಾನು ಹಾಕಿದ ದಾರ್‍ಯಾಗ ಹೋಗಬೇಕಂತಾನ.. ನಿಮಪ್ಪ ನೀನು ತಿಳಕೊಂಡಂಗ ಒಳ್ಳೆ ಮನುಷ್ಯಲ್ಲ... ಆತ ಭಾರಿ ಇಸಪಾತಕ ಅದ್ಯಾನ... ನಾನು ನಿಮ್‌ಜತಿ ಬೆಂಗಳೂರಾಗಿದ್ದಾಗ ಒಬ್ರು ಜತೆನು ಕೆಟ್ಟ ಸಂಬಂಧ ಬೆಳಿಸಿಲ್ಲ. ಎಷ್ಟು ಚಲೋಇದ್ವಿ ಅಂಬೋದು ನಿನಗ ಎಲ್ಲಾ ಗೊತ್ತೈತಿ... ಊರಾಗ ಪತ್ರೋಳಿ ಎತ್ತೋರು ಮಾತುಕೇಳಿ ನನ್‌ಮ್ಯಾಲ ಅಪವಾದ ಹೋರಿಸಿ, ನಮ್‌ಮ್ಯಾಲಿನ ಸಿಟ್ಟಿಗೆ ಮನಿ ಉದ್ಧಾರ ಮಾಡಲಾರದ ನಮ್ಮನ್ನ ತನ್ ಚಾಕರಿ ಮಾಡಾಕ ಇಟ್ಟುಕೊಂಡಾನ... ನಾವು ಇಲ್ಲಿಂದ ಜಾಗ ಖಾಲಿ ಮಾಡಿದ್ರನೇ ಎಲ್ಲಾ ಬಗೆರೆದು.. ಇಲ್ಲಂದ್ರ ನಿಮಪ್ಪ ಸಾಯವರೆಗೆ ನನ್ ತೊಡೆಗೆಲ್ಲ ಹುಲ್ಲಿನ ಹೊರೆಸ್ತು ಕೂದ್ಲ ಬೆಳಿತಾವು ನೋಡು...' ಅಂತ ಪಿಂಜಿ ಶೇಕ್ರನ ತೆಕ್ಕಿ ಬಡಕೊಂಡು ಅಳತೊಡಗಿದ್ಲು. ಶೇಕ್ರ ಅಷ್ಟತ್ತಿನ್ಯಾಗ ಏನ್ ಸಮಾಧಾನ ಮಾಡಬೇಕಂತ ಗೊತ್ತಾಗದೆ ತೆಕ್ಕಿ ಬಿಡಿಸಿಕೊಂಡು ದಡದಡ ಮನಿ ಅಂಗಳಕ ಬಂದ.



ರಾಗಪ್ಪ ಹೊರಗ ಮಲಿಗಿದಾತ ಒಂದೊತ್ತಿನ್ಯಾಗ ಹೊಟ್ಟಿ ಉಬ್ಬಿಸಿಕೊಂಡು ಐದತ್ತು ನಿಮಿಷಕ್ಕೆ ಕರ್‍ರಗ ಆಗೋದು, ಬೆಳ್ಳಗಾಗಿ ಒದ್ದಾಡದನ್ನ ಶೇಕ್ರ ಕಣ್ಣಾರೆ ನೋಡಿ, ಹತ್ತಿರಕ ಹೋಗಿ ಏನೂ ಮಾಡಲಿಲ್ಲ. ಉಡದ ಬ್ಯಾಟಿನ ಅಷ್ಟತ್ತಿನ್ಯಾಗ ಮೆಲ್ಲಕ ಮುಚ್ಚಳ ತೆರದು ನೋಡಿದ. ಉಡದ ಬ್ಯಾಟಿ ಕೆಂಪಗ ಇದ್ದಿದ್ದು ಈಗ ಪೂರ ಜಂತಿಯ ಇಲಾಣ ಬಣ್ಣಕ ತಿರಿಗಿತ್ತು. ಖಾತ್ರಿ ಮಾಡಿಕೊಂಡವನೇ ಅದನ್ನ ತಿಪ್ಪಿಗೆ ಚೆಲ್ಲಿ ಬಂದು ಶಾಕಯ್ಯನ ಮನೆಕಡೆ ಬಂದು ಮಲಗಿದ. ಬೆಳಕು ಹರಿಲಾಕ ಮಸುಮಸುಕು ಇತ್ತೇನೋ... ಸಂಡಾಸಿಗೆ ಹೋಗೊ ದಾರಿಕಡೆ ಲಬಲಬ ವೈಕೊಳ್ಳೊದು ಕೇಳಿಸ್ತು. ಶಾಕಯ್ಯನ ಬಗಲಾಗಿಂದ ಶೇಕ್ರ ಎದ್ದವನೇ ಸೀದಾ ಅಲ್ಲಿಗೆ ಹೋದ. ಕಳ್‌ದ್ಯಾವ ಸತ್ತನಂತ ಶೆಡ್ಡಿನ ತುಂಬಾ ಆಡಾಡಿ ಅಳುವವರ ಮುಂದ ಊರ್‌ಮಂದಿ ಓಡಾಡದನ್ನ ನೋಡಿ ಹತ್ತಿರಕ ಹೋಗಿ ನೋಡಲಿಲ್ಲ. ಮನಿಗೆ ಬಂದವನು ರಾಗಪ್ಪನ ಮಂಚದ ಬಳಿ ಕೂತ. ರಾಗಪ್ಪನ ಹೊಟ್ಟಿ ಕಲ್ಲಾಗಿತ್ತು.

ಪಿಂಜಿ ಆಗಲೇ ಎದ್ದು ಕಳ್‌ದ್ಯಾವನ ಸಾವಿನ ಸುದ್ದಿ ಕೇಳಿ ಒಲಿಗೆ ಬೆಂಕಿಮಾಡಿ ಒಲಿ ಬೆಳಕಿಗೆ ಮುಖ ದಿಟ್ಟಿಸಿಮಾಡಿ ಕೂತಿದ್ಲು. ಪಿಂಜಿಯ ಮುಖದಲ್ಲಿ ಯಾವ ಗೆರೆನೂ ಕಾಣಲಿಲ್ಲ.

ಶೇಕ್ರ ಮೆಲ್ಲಕ ರಾಗಪ್ಪನ ಪಾದದ ಬೆರಳನ್ನು ಮುಟ್ಟಿದ. ಪಾದಗಳು ತಣ್ಣಗಾಗಿ ಎಲ್ಲ ಬೆರಳಿನ ಉಗುರು ನೀಲಿ ಬಣ್ಣಕ್ಕೆ ತಿರುಗಿದ್ವು. ಗಾಬರಿ ಗೊಂಡವನಂತೆ ರಾಗಪ್ಪನ ಹೆಬ್ಬೆಳ್ಳನ್ನು ಪಟ್‌ಂತ ಮುರುದ. ರಾಗಪ್ಪ ಎಚ್ಚರಗೊಳ್ಳಲಿಲ್ಲ. ಆಗಲೇ ಉಸ್ರುನಿಂತು ಮೈಬಣ್ಣ ಹಚ್ಚಗ ತಿರಿಗಿತ್ತು.

* * *

ಸಂಜೆ ಆಗಿತ್ತು. ಚಂದಪೂರ ಎಂಬ ಊರುಮಂದಿ ಕಳ್‌ದ್ಯಾವನ ಮಣ್ಣುಮಾಡಿ ರಾಗಪ್ಪನ ಸಾವಿನ ಮನಿಗೆ ಇರುವೆ ಸಾಲಿಡತೊಡಗಿದ್ರು...! ●